**29/09/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಮ್ಮನ್ನು ಸಂಗದೋಷದಿಂದ ಬಹಳ ಸಂಭಾಲನೆ ಮಾಡಿಕೊಳ್ಳಬೇಕಾಗಿದೆ ಏಕೆಂದರೆ ಸಂಗದೋಷದಲ್ಲಿ ಬರುವುದರಿಂದಲೇ ಉಲ್ಟಾ ಕರ್ಮಗಳಾಗುತ್ತವೆ, ತಂದೆಯ ನೆನಪು ಮರೆತುಹೋಗುತ್ತದೆ"

ಪ್ರಶ್ನೆ: ಯಾವ ನಡುವಳಿಕೆಯ ಆಧಾರದ ಮೇಲೆ ನೀವು ಮಕ್ಕಳು ತಮ್ಮ ಸ್ಥಿತಿಯನ್ನು ಮುಂದುವರೆಸಲು ಸಾಧ್ಯ?

ಉತ್ತರ: ಒಂದುವೇಳೆ ಎಂದಾದರೂ ತಪ್ಪಾಗುತ್ತದೆ ಎಂದರೆ ತಂದೆಯೊಂದಿಗೆ ಕ್ಷಮೆ ಕೇಳುವ ನಡವಳಿಕೆಯಾದರೂ ಬೇಕಾಗಿದೆ. ಬಾಬಾ ತಪ್ಪಾಯಿತು ಎಂದು ಹೇಳಬೇಕು. ಇದರಲ್ಲಿ ಸ್ವಲ್ಪವೂ ಸಹ ದೇಹಾಭಿಮಾನ ಬರಬಾರದು, ಇದರಿಂದ ತಮ್ಮ ಸ್ಥಿತಿಯು ಮುಂದುವರೆಯುತ್ತಾ ಇರುವುದು. ತಂದೆಯೊಂದಿಗೆ ಸತ್ಯ ಹೃದಯದವರಾಗಿರುವುದೇ ಏರುವಕಲೆಗೆ ಆಧಾರವಾಗಿದೆ. ಎಂದೂ ಸಹ ನಾನೇ ಬುದ್ಧಿವಂತನೆಂದು ತಿಳಿದುಕೊಳ್ಳಬಾರದು. ಪ್ರತಿಯೊಬ್ಬರಿಂದ ತಪ್ಪುಗಳಾಗುತ್ತದೆ ಏಕೆಂದರೆ ಇನ್ನೂ ಯಾರೂ ಪರಿಪೂರ್ಣರಾಗಿಲ್ಲ.

ಗೀತೆ: ನಾವು ಆ ಮಾರ್ಗದಂತೆ ನಡೆಯಬೇಕಾಗಿದೆ.................

ಓಂ ಶಾಂತಿ. ಏನನ್ನಾದರೂ ಹೇಳಬೇಕಾಗುತ್ತದೆ ಆ ಲೆಕ್ಕದಿಂದ ಓಂಶಾಂತಿ ಎಂದು ಹೇಳುವುದು ಒಳ್ಳೆಯದಾಗಿದೆ. ಆತ್ಮಕ್ಕೆ ತನ್ನ ಸ್ವಧರ್ಮವನ್ನು ತಿಳಿಸಲಾಗುತ್ತದೆ. ತಂದೆಯೂ ಸಹ ಹೇಳುತ್ತಾರೆ ನಾವು ಶಾಂತರೆಂದು. ಶಾಂತಿ ದೇಶದಲ್ಲಿರುವವರಾಗಿದ್ದೇವೆ. ನೀವೂಸಹ ಮೂಲತಃ ಆತ್ಮರಾಗಿದ್ದೀರಿ. ನಿಮ್ಮ ಸ್ವಧರ್ಮ ಶಾಂತಿಯಾಗಿದೆ. ಇಡೀ ಪ್ರಪಂಚವು ಶಾಂತಿ-ಶಾಂತಿ ಎನ್ನುತ್ತಿರುತ್ತದೆ ಆದರೆ ಯಾವುದಕ್ಕೆ ಶಾಂತಿ ಎಂದು ಕರೆಯಲಾಗುತ್ತದೆ, ಎನ್ನುವುದನನ್ನು ಯಾರೂ ತಿಳಿದುಕೊಂಡಿಲ್ಲ. ಇಲ್ಲಿನ ಜಗಳ-ಕಲಹಗಳೆಲ್ಲವೂ ಶಾಂತವಾಗಿಬಿಡಲಿ ಎಂದು ಅವರು ತಿಳಿಯುತ್ತಾರೆ ಆದರೆ ಆ ಶಾಂತಿಯಂತೂ ಯಾವ ಕೆಲಸಕ್ಕೂ ಬರುವುದಿಲ್ಲ. ಮನೆಯಲ್ಲಿ ಸ್ತ್ರೀ-ಪುರುಷರಿರುತ್ತಾರೆ ಎಂದರೆ ಕೆಲವರು ಜಗಳವಾಡುತ್ತಾರೆ ಇನ್ನೂ ಕೆಲವರು ಇಲ್ಲ ಅಂದಮೇಲೆ ಅದು ಶಾಂತಿಯಾಯಿತೆ? ಶಾಂತಿಯು ಬೇರೆ ವಸ್ತುವಾಗಿದೆ, ಶಾಂತಿಯಂತೂ ಆತ್ಮದ ಸ್ವಧರ್ಮವಾಗಿದೆ ಹಾಗೆಯೇ ತಂದೆಯ ಸ್ವಧರ್ಮವೂ ಶಾಂತಿಯಾಗಿದೆ. ಆತ್ಮಗಳ ತಂದೆ ಯಾರು? ಪರಮಪಿತ ಪರಮಾತ್ಮ, ಅವರ ಧರ್ಮ ಯಾವುದು? ಅವರ ಧರ್ಮವೂ ಶಾಂತಿಯಾಗಿದೆ. ಪರಮಪಿತ ಪರಮಾತ್ಮ ಶಾಂತಿಯ ದೇಶದಲ್ಲಿರುವವರಾಗಿದ್ದಾರೆ, ನಾವೂ ಸಹ ಅಲ್ಲಿದ್ದೆವು ಅಂದಾಗ ಯಾರೇ ಬರಲಿ ತಿಳಿಸಿ - ನಿಮ್ಮ ಸ್ವಧರ್ಮವು ಶಾಂತಿಯಾಗಿದೆಯಲ್ಲವೆ. ನೀವು ಮೂಲತಃ ಅಲ್ಲಿನ ನಿವಾಸಿಗಳಾಗಿದ್ದೀರಿ, ಇಲ್ಲಿ ಪಾತ್ರವನ್ನಭಿನಯಿಸಲು ಬಂದಿದ್ದೀರಿ. ಶರೀರದ ಮುಖಾಂತರ ಪಾತ್ರವನ್ನಂತೂ ಅಭಿನಯಿಸಲೇಬೇಕಾಗಿದೆ. ವಾಸ್ತವದಲ್ಲಿ ಶಾಂತಿಗಾಗಿ ಕಾಡಿಗೆ ಹೋಗುವ ಅವಶ್ಯಕತೆಯೂ ಇಲ್ಲ. ಆತ್ಮಕ್ಕೆ ತನ್ನ ಸ್ವಧರ್ಮದ ಬಗ್ಗೆ ಗೊತ್ತಾಗಿದೆ. ಆತ್ಮವು ಸುಸ್ತಾದಾಗ ರಾತ್ರಿಯಲ್ಲಿ ಅಶರೀರಿಯಾಗಿ ಶಾಂತವಾಗಿಬಿಡುತ್ತದೆ. ರಾತ್ರಿಯಲ್ಲಿ ಎಷ್ಟೊಂದು ಶಾಂತಿ ಇರುತ್ತದೆ. ಮುಂಜಾನೆಯಾದಾಗ ಶಬ್ದವು ಪ್ರಾರಂಭವಾಗಿಬಿಡುತ್ತದೆ. ಅದು ಹದ್ದಿನ ದಿನ-ರಾತ್ರಿಯಾಗಿದೆ. ಆತ್ಮವು 84 ಜನ್ಮಗಳ ಪಾತ್ರವನ್ನಭಿಯಿಸಿ ಸುಸ್ತಾಗಿಬಿಡುತ್ತದೆ ಆದ್ದರಿಂದ ಹಿಂತಿರುಗಿ ಶಾಂತಿಧಾಮಕ್ಕೆ ಹೋಗಬೇಕೆಂದು ಹೇಳುತ್ತಾರೆ. ಶಾಂತಿಧಾಮ ಮತ್ತು ಸುಖಧಾಮವನ್ನು ನೆನಪು ಮಾಡಿ ಎಂದು ತಂದೆಯೂ ಸಹ ಹೇಳುತ್ತಾರೆ. ಸುಖಧಾಮದಲ್ಲಿ ಕುಳಿತು ನೆನಪು ಮಾಡಲಾಗುತ್ತದೆಯೇ? ದುಃಖಧಾಮದಲ್ಲಿ, ಅಶಾಂತಿಧಾಮದಲ್ಲಿಯೇ ನೆನಪು ಮಾಡಲಾಗುತ್ತದೆ ಆದ್ದರಿಂದ ತಂದೆಯು ತಿಳಿಸುತ್ತಾರೆ - ಮಕ್ಕಳೇ, ಈಗ ನಾಟಕವು ಪೂರ್ಣವಾಯಿತು, ನೀವು ಮನೆಗೆ ಹೋಗಬೇಕಾಗಿದೆ, ಮತ್ತೆ ನಿಮಗೋಸ್ಕರ ಶಾಂತಿಯೂ ಇದೆ ಮತ್ತು ಸುಖವೂ ಇದೆ.

ನಾನು ಮಾರ್ಗದರ್ಶಕನಾಗಿದ್ದೇನೆ, ನಿಮ್ಮನ್ನು ಹಿಂತಿರುಗಿ ಸತ್ಯಯಾತ್ರೆಯಲ್ಲಿ ಕರೆದುಕೊಂಡು ಹೋಗಲು ಬಂದಿದ್ದೇನೆ ಎಂದು ತಂದೆಯು ತಿಳಿಸುತ್ತಾರೆ. ಶಾಂತಿಧಾಮದ ಮಾರ್ಗದರ್ಶಕರೂ ಒಬ್ಬರೇ ಆಗುತ್ತಾರೆ ಅಥವಾ ಅನೇಕ ಮಕ್ಕಳ ಆಗುತ್ತಾರೆ. ಒಬ್ಬರಿಂದಂತೂ ಕೆಲಸವಾಗುವುದಿಲ್ಲ. ಎಷ್ಟು ದೊಡ್ಡ ಸೈನ್ಯವಿದೆ. ಎಲ್ಲರ ಮುಖವು ಶಾಂತಿಧಾಮದ ಕಡೆ ಇದೆ. ಅದು ಅತೀ ದೂರವಿರುವ ಧಾಮವಾಗಿದೆ. ಬದರಿನಾಥ, ಅಮರನಾಥಕ್ಕೆ ಹೋಗುವುದೇನು ದೂರವಲ್ಲ. ಅಲ್ಲಿ ಹೋಗುವುದಂತೂ ಬಹಳ ಸಹಜವಾಗಿದೆ ಅಂದಾಗ ತಿಳಿಸಿ - ಮೂಲವತನ, ಸೂಕ್ಷ್ಮವತನಕ್ಕೆ ಹೋಗುವುದು ಸಹಜವೋ ಅಥವಾ ಅಮರನಾಥ, ಬದರಿನಾಥಕ್ಕೆ ಹೋಗುವುದು ಸಹಜವೋ? ಸೂಕ್ಷ್ಮವತನ-ಮೂಲವತನ ಸಮೀಪವಿದೆಯೋ, ಅಮರನಾಥ-ಬದರಿನಾಥ ಸಮೀಪವಿದೆಯೋ? ನೋಡುವುದಕ್ಕಂತೂ ಮೂಲವತನ-ಸೂಕ್ಷ್ಮವತನವು ಅತೀ ದೂರವಿದೆ ಅಲ್ಲಿಗೆ ಹೋಗುವುದರಲ್ಲಿ ನಿಧಾನವಾಗುವುದಿಲ್ಲ, ಸೆಕೆಂಡಿನ ಮಾತಾಗಿದೆ. ನೀವು ಕೇವಲ ಬುದ್ಧಿಯಿಂದ ನೆನಪು ಮಾಡಿ. ಆ ಶಾರೀರಿಕ ಯಾತ್ರೆಗಳಂತೂ ಯಾವುದೇ ಹೊಸಮಾತಲ್ಲ. ಅರ್ಧಕಲ್ಪದಿಂದ ಆ ಯಾತ್ರೆಯನ್ನು ಮಾಡುತ್ತಾ ಬಂದಿದ್ದೀರಿ ಆದರೆ ಈ ಆತ್ಮಿಕ ಯಾತ್ರೆಯನ್ನು ಒಬ್ಬ ತಂದೆಯೇ ಬಂದು ಮಾಡಿಸುತ್ತಾರೆ, ನೀವು ಮಂದಿರಗಳಲ್ಲಿ ಹೋಗಿ ಈ ದೇವಿ-ದೇವತೆಗಳು ಯಾವಾಗ ರಾಜ್ಯ ಮಾಡುತ್ತಿದ್ದರು, ಇವರನ್ನು ಇಂತಹ ಪೂಜ್ಯರನ್ನಾಗಿ ಯಾರು ಮಾಡಿದರು? ಎಂದು ತಿಳಿಸಿ ಏಕೆಂದರೆ ನಿಮಗೆ ಗೊತ್ತಿದೆ -ನಾವೇ ಪೂಜ್ಯರಾಗಿದ್ದೆವು ನಂತರ ನಾವೇ ಪೂಜಾರಿಗಳಾಗಿದ್ದೇವೆ ಅಂದಮೇಲೆ ಪೂಜಾರಿಯ ದರ್ಜೆಯು ಕಡಿಮೆಯಾಯಿತಲ್ಲವೆ. ಪೂಜ್ಯರು

ಶ್ರೇಷ್ಠರಾಗಿದ್ದಾರೆ. ತಂದೆಯು ಪೂಜ್ಯರನ್ನಾಗಿ ಮಾಡುತ್ತಾರೆ. ನೀವು ಪೂಜ್ಯ ದೇವಿ-ದೇವತೆಗಳಾಗಿದ್ದೀರಿ ನಂತರ ಪೂಜಾರಿಗಳಾದಿರಿ, ಈಗ ಪೂಜೆಯನ್ನು ಬಿಟ್ಟು ಪುನಃ ಪೂಜ್ಯರಾಗಬೇಕಾಗಿದೆ. ಮಾಯೆಯ ಬಹಳ ವಿಘ್ನಗಳು ಬರುತ್ತದೆ. ಅಬಲೆಯರ ಮೇಲೆ ಅತ್ಯಾಚಾರಗಳಾಗುತ್ತದೆ. ಅನ್ಯ ಯಾತ್ರೆಗಳಿಗೆ ಹೋಗಲು ಮಂದಿರಗಳಿಗೆ, ಅನ್ಯ ಸತ್ಸಂಗಗಳಿಗೆ ಹೋಗಲು ಯಾರೂ ತಡೆಯುವುದಿಲ್ಲ. ಇಲ್ಲಿ ಪೂಜಾರಿಗಳಿಂದ ಪೂಜ್ಯರಾಗುವುದರಲ್ಲಿ ಮಾಯೆಯು ಎಷ್ಟೊಂದು ತೊಂದರೆ ಕೊಡುತ್ತದೆ. ಘಳಿಗೆ-ಘಳಿಗೆಯೂ ಬಿದ್ದುಹೋಗುತ್ತಾರೆ. ಕಾಮದ ಕಂದಕದಲ್ಲಿ ಬಹಳಷ್ಟು ಜನ ಬೀಳುತ್ತಾರೆ. ತಂದೆಯು ತಿಳಿಸುತ್ತಾರೆ - ಕೊಳಕರಾಗಬೇಡಿ, ಇದರಿಂದ ಸಂಭಾಲನೆ ಮಾಡಿಕೊಳ್ಳಬೇಕು. ಕಾಮಚಿತೆಯ ಮೇಲೇರುವುದು, ವಿಷಯಸಾಗರದಲ್ಲಿ ಮುಳುಗುವುದು ಎಲ್ಲದಕ್ಕಿಂತ ಕೊಳಕಾಗಿದೆ. ತಂದೆಯು ತಿಳಿಸುತ್ತಾರೆ - ಮಕ್ಕಳೇ, ಕಾಮ ಮಹಾಶತ್ರುವಾಗಿದೆ ಆದ್ದರಿಂದ ಎಂದೂ ಸಹ ವಿಕಾರದಲ್ಲಿ ಹೋಗುವ ಸಂಕಲ್ಪವನ್ನು ಮಾಡಬಾರದು ಇದರಿಂದ ಕೊಳಕರಾಗಿಬಿಡುವಿರಿ, ಈ ರೀತಿ ತಿಳಿಯಬೇಡಿ ಇಲ್ಲಿಗೆ ಯಾರೆಲ್ಲಾ ಬರುತ್ತಾರೆ ಅವರ ಬುದ್ಧಿ ವಿಷದಿಂದ ಮುಕ್ತವಾಗಿಬಿಡುತ್ತದೆ ಎಂದು. ಕೆಲವರು ಆರೀತಿಯೂ ಇರುತ್ತಾರೆ ಪರಸ್ಪರ ನೋಡಿದರೆ ಮನಸ್ಸಿನೊಳಗೆ ಕೊಳಕರಾಗಲು ಬಿರುಗಾಳಿ ಏಳುತ್ತದೆ. ತಂದೆ ಹೇಳುತ್ತಾರೆ ಎಂದೂ ಕೊಳಕಾಗಬಾರದು, ಯಾರನ್ನೂ ಹಿಂಬಾಲಿಸಬಾರದು.ಯಾರ ಹಿಂದೆಯೂ ಬೀಳಬಾರದು. ಎಂದೂ ವಿಕಾರದಲ್ಲಿ ಬೀಳುವ ಪುರುಷಾರ್ಥ ಮಾಡಬೇಡಿ. ತಂದೆಯು ಇದರಿಂದ ಪಾರು ಮಾಡುತ್ತಾ ಇರುತ್ತಾರೆ. ಇದು ಬೀಳುವ ಮತ್ತು ಏಳುವ,ಹಾವು-ಏಣಿಯ ಆಟವು ನಡೆಯುತ್ತಿರುತ್ತದೆ. ಮಾಯೆಯು ಎಷ್ಟೊಂದು ಬಿರುಗಾಳಿಗಳನ್ನು ತರುತ್ತದೆ. ಎಷ್ಟೊಂದು ಒಳ್ಳೆಯ ಪ್ರಾಮಾಣಿಕ, ಆಜ್ಞಾಕಾರಿ, ಸೇವಾಧಾರಿ ಮಗುವಾಗಿದ್ದರು ಅಂತಹವರಿಗೂ ಸಹ ಮಾಯೆಯು ಇಂತಹ ಏಟನ್ನು ಕೊಟ್ಟಿತು ಅದರಿಂದ ಅವರು ಒಂದೇಬಾರಿಗೆ ಸಮಾಪ್ತಿಯಾಗಿ ಬಿಟ್ಟರು, ಸತ್ತುಹೋದರು (ಜ್ಞಾನ ಬಿಟ್ಟರು) ಇದು ಸಹ ಡ್ರಾಮಾ. ಮಾಯೆಯು ಕೊಳಕರನ್ನಾಗಿ ಮಾಡುತ್ತದೆ. ಅರ್ಧಕಲ್ಪ ದುಃಖ ಕೊಡುವುದು ಮಾಯೆಯಾಗಿದೆ ತಂದೆಯಲ್ಲ. ಬಹಳ ಸಹಜವಾಗಿ ಈಶ್ವರನೇ ದುಃಖ-ಸುಖವನ್ನು ಕೊಡುವರೆಂದು ದೋಷವನ್ನು ಹಾಕುತ್ತಾರೆ. ಈಶ್ವರನನ್ನು ತಂದೆ ಎಂದು ತಿಳಿಯುವುದಿಲ್ಲ. ಪರಮಾತ್ಮನು ಯಾರಿಗಾದರೂ ದುಃಖವನ್ನು ಹೇಗೆ ಕೊಡುತ್ತಾರೆ? ಪರಮಾತ್ಮನು ದುಃಖವನ್ನು ಕೋಡುವುದಾದರೆ ಉಳಿದ ಮನುಷ್ಯರು ಪರಸ್ಪರರಿಗೆ ಬಹಳ ದುಃಖವನ್ನೇ ಕೊಡುತ್ತಾರೆ. ತಂದೆಯು ತಿಳಿಸುತ್ತಾರೆ - ನೀವೇ ತಾವಾಗಿ ಇಂತಹ ಕರ್ಮವನ್ನು ಮಾಡುತ್ತೀರಿ. ಸಂಗದೋಷದಲ್ಲಿಯೂ ಸಹ ಕೆಟ್ಟಕರ್ಮವನ್ನು ಮಾಡಿಬಿಡುತ್ತಿರಿ. ತಂದೆಯನ್ನು ಮರೆತುಬಿಡುವಿರಿ. ಸಾಧಾರಣವಾಗಿದ್ದಾರಲ್ಲವೇ. ಆದುದರಿಂದ ಮಕ್ಕಳು ಮರೆತುಬಿಡುತ್ತಾರೆ. ತಂದೆಯಂತೂ ಬಹಳ ಒಳ್ಳೆಯ ಶಿಕ್ಷಣವನ್ನೇ ಕೊಡುತ್ತಾರೆ, ಆದರೆ ಅವರನ್ನು ಮರೆತುಹೋಗುತ್ತಾರೆ. ಪೂರ್ಣ ಯೋಗವಿಲ್ಲವೆಂದು ತಂದೆಯು ತಿಳಿಸುತ್ತಾರೆ. ಈ ರೀತಿ ತಿಳಿಯಬೇಡಿ ನಾವು ಭಾಷಣ ಮಾಡುವವರಾಗಿದ್ದೇವೆ ಎಂದು.ಒಬ್ಬ ಪಂಡಿತನ ಕಥೆಯಿದೆಯಲ್ಲವೆ, ಅವನು ಬೇರೆಯವರಿಗೆ ರಾಮ-ರಾಮ ಎಂದು ಹೇಳಿದರೆ ನದಿಯನ್ನು ಪಾರು ಮಾಡಿಬಿಡುವಿರಿ ಎಂದು ಹೇಳಿದನು. ಆದರೆ ತಾನು ಮಾತ್ರ ನದಿ ಪಾರುಮಾಡಲು ಸಾಧ್ಯವಾಗಲಿಲ್ಲ. ದೋಣಿಯನ್ನು ತಂದರೆ ಪಾರುಮಾಡ ಬಹುದೆಂದು ಹೇಳಿದನು. ಆದರೆ ಏನನ್ನು ತಾನು ಹೇಳುತ್ತಿದ್ದನೋ ಅದನ್ನು ಅವನು ಮಾಡಲು ಸಾಧ್ಯವಾಗಲಿಲ್ಲ. ಕೇವಲ ಹೇಳುವುದಲ್ಲ ಆದರೆ ಮಾಡಬೇಕಾಗಿದೆ. ಹೇಳುವುದು, ಮಾಡುವುದು, ಇರುವುದು, ಎಲ್ಲವೂ ಸಮಾನವಾಗಿರಲಿ ಆದ್ದರಿಂದ ತಂದೆಯನ್ನು ಮರೆಯದಿರಿ. ತಂದೆಯು ತಪ್ಪಿಲ್ಲದವರನ್ನಾಗಿ ಮಾಡುತ್ತಾರೆ. ತಂದೆಯು ತಿಳಿಸುತ್ತಾರೆ -ಒಂದುವೇಳೆ ಏನಾದರೂ ತಪ್ಪಾದರೆ, ಬಂದು ಬಾಬಾ ನನ್ನಿಂದ ತಪ್ಪಾಯಿತು ಕ್ಷಮೆಮಾಡಿ ಎಂದು ಕೇಳಿ- ಐ ಆಮ್ ಸಾರಿ. ತಿಳಿಯಿರಿ, ಶಿವ ಬಾಬಾ ತಿಳಿಸುತ್ತಾರೆ ಇದು ನಿಮ್ಮ ತಪ್ಪಾಗಿದೆ ಎಂದು. ಒಳ್ಳೆಯದು, ಬಾಬಾ ನಾನು ಕ್ಷಮೆಯಾಚಿಸುತ್ತೇನೆ ಎಂದು ತಿಳಿಸಿ. ಒಳ್ಳೊಳ್ಳೆಯ ಮಕ್ಕಳಲ್ಲಿಯೂ ಸಹ ಈ ದೊಡ್ಡತನಯಿರುವುದಿಲ್ಲ, ಇಷ್ಟು ದೊಡ್ಡ ತಪ್ಪು ಮಾಡಿದ್ದೇನೆ ಕ್ಷಮೆಯಾದರೂ ಕೇಳೋಣ ಎಂದು, ತಮ್ಮನ್ನು ತಾವು ಎಲ್ಲಾತಿಳಿದವರೆಂದು ತಿಳಿಯುತ್ತೀರೆ. ಪಾಪ ಮಾಡಿದ್ದೀಆದರೆ ಕ್ಷಮೆಯಾದರೂ ಕೇಳಿ. ತಮ್ಮನ್ನು ತಾವೇ ಬುದ್ಧಿವಂತರೆಂದು ತಿಳಿಯುತ್ತೀರಿ. ಪಾಪ ಮಾಡುತ್ತೀರೆಂದರೆ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಅದರ ವೃದ್ಧಿಯಾಗುತ್ತಾ ಇರುತ್ತದೆ. ತಂದೆಯ ಜೊತೆ ಬುದ್ಧಿಯೋಗವು ಬಹಳ ಚೆನ್ನಾಗಿರಬೇಕು. ಭಲೆ ಬಹಳ ಒಳ್ಳೊಳ್ಳೆಯ ಭಾಷಣಗಳನ್ನು ಮಾಡುತ್ತಾರೆ ಆದರೆ ಇನ್ನೂ ಯಾರೂ ಸಂಪೂರ್ಣರಾಗಿಲ್ಲ. ಅಂತ್ಯದತನಕ ಬೀಳುತ್ತಾ-ಏಳುತ್ತಾ ಇರುತ್ತಾರೆ. ಬಾಬಾ ನಮ್ಮಿಂದ ಈ ತಪ್ಪಾಯಿತು ತಾವು ಕ್ಷಮಿಸಿ, ದಯಾಸಾಗರ ತಂದೆಯೇ, ಕ್ಷಮಿಸಿ ಎಂದು ಹೇಳುತ್ತಾರೆ. ಭಕ್ತಿಮಾರ್ಗದಲ್ಲಿ ಇಡೀ ದಿನ ಕ್ಷಮಿಸಿ, ಕ್ಷಮಿಸಿ ಎನ್ನುತ್ತಿರುತ್ತಾರೆ. ಕ್ಷಮಿಸಿ ಧರ್ಮರಾಜನ ಮುಖಾಂತರ ಶಿಕ್ಷೆಯನ್ನು ಕೊಡಿಸಬೇಡಿ ಎಂದು ತಂದೆಗೆ ಹೇಳುತ್ತಾರೆ. ಆದ್ದರಿಂದ ಬಹಳ ಎಚ್ಚರಿಕೆಯಿರಬೇಕು. ನಾವು 16 ಕಲಾಸಂಪೂರ್ಣರಾಗಿಬಿಟ್ಟಿದ್ದೇವೆಂದು ತಿಳಿಯಬೇಡಿ. ಇಲ್ಲಿ ಬಹಳ ಮಕ್ಕಳು ಬರೆಯುತ್ತಾರೆ - ಬಾಬಾ, ಆಶುದ್ಧ ಸ್ವಪ್ನಗಳು ಬಹಳ ಬರುತ್ತವೆ, ತಂದೆಯ ನೆನಪೇ ನಿಲ್ಲುವುದಿಲ್ಲ. ತಾನೇ ಬುದ್ಧಿವಂತನೆಂದು ತಿಳಿಯಬಾರದು ಅಂತ್ಯದಲ್ಲಿ 16 ಕಲಾಸಂಪೂರ್ಣರಾಗುತ್ತೀರಿ. ಈಗಂತೂ ಗ್ರಹಣ ಹಿಡಿದಿದೆ. ನಿಮ್ಮ ಅಂತಹ ಅವಸ್ಥೆಯು ಬರಬೇಕಾಗಿದೆ -ಇಲ್ಲಿ ಕುಳಿತು –ಕುಳಿತಿದ್ದಂತೆಯೇ ಹಾರುತ್ತಾ ಇರುತ್ತೀರಿ. ಆತ್ಮಕ್ಕೆ ಸೆಳೆತವಾಗುತ್ತದೆ ಏಕೆಂದರೆ ಕಲ್ಪದಿಂದ ಸುಸ್ತಾಗಿರುವ ಕಾರಣ ಬೇಗ-ಬೇಗ ಹೋಗಬೇಕೆಂದು ಆತುರವಾಗುತ್ತದೆ. ಆದರೆ ಅದಕ್ಕೆ ಯೋಗ್ಯರೂ ಆಗಬೇಕಲ್ಲವೆ. ಕೆಲವರಂತೂ ಇಲ್ಲಿಯೇ ಸುತ್ತುವ-ತಿರುಗಾಡುವ ಆಭರಣಗಳನ್ನು ಧರಿಸುವುದರಲ್ಲಿ ಖುಷಿಯಾಗಿಬಿಡುತ್ತಾರೆ ನಂತರ ದುಃಖಿಯಾದಾಗ ತಂದೆಯನ್ನು ಏಕಾದರೂ ಬಿಟ್ಟೆವೋ ಎಂದು ಹೇಳುತ್ತಾರೆ. ಒಳ್ಳೆಯದು, ಮತ್ತೆ ಸಾಹಸ ತೋರಿಸಿ, ಕಲಿಯಿರಿ. ಅಪಕಾರ ಮಾಡುವವರಿಗೂ ಸಹ ಉಪಕಾರ ಮಾಡಬೇಕು ಆದರೆ ಬದಲಿಗೆ ಇನ್ನೂ ಅವರ ತಲೆಕೆಡಿಸಿಬಿಡುವುದಲ್ಲ. ಮಾಯೆಯು ಬೀಳಿಸುತ್ತದೆ, ತಂದೆಯು ಏಳಿಸುತ್ತಾರೆ. ಗುರಿಯು ಉನ್ನತವಾಗಿದೆ ಮತ್ತು ಇದೆಲ್ಲವೂ ಬುದ್ಧಿಯೋಗ ಯಾತ್ರೆಯಾಗಿದೆ. ಪುರುಷಾರ್ಥದಲ್ಲಿ ಸಮಯ

ಹಿಡಿಸುತ್ತದೆ ಲಕ್ಷ್ಯವಂತೂ ಬಹಳ ಸಹಜವಾಗಿದೆ. ಒಂದು ಸೆಕೆಂಡಿನಲ್ಲಿ ನೀವು ಜೀವನ್ಮುಕ್ತಿಯ ಅಧಿಕಾರಿಗಳಾಗಿಬಿಡುತ್ತೀರಿ. ಒಂದು ಬಾರಿ ಬಾಬಾ ಎಂದು ಹೇಳುತ್ತೀರಿ ಮತ್ತೆ ಏಕೆ ಮರೆಯುತ್ತೀರಿ. ತಂದೆಯಿಂದ ಸ್ವರ್ಗದ ಆಸ್ತಿಯನ್ನು ಪಡೆಯುತ್ತೇವೆ ಎನ್ನುವ ನಿಶ್ಚಯವಿದೆ ಮತ್ತೆ ಏಕೆ ಬೀಳುತ್ತಿರಿ? ನೆನಪು ಮಾಡಿ ಏಕೆ ಸಂಭಾಲನೆ ಮಾಡಿಕೊಳ್ಳುವುದಿಲ್ಲ? ಒಳ್ಳೊಳ್ಳೆಯ ಮಕ್ಕಳೂ ಮರೆತುಹೋಗುತ್ತಾರೆ ಮತ್ತೆ ಇನ್ನೂ ಸೇವಾಭಂಗವಾಗುತ್ತದೆ. ಸೇವೆಯು ಗುಪ್ತವಾಗಿದೆ ಮತ್ತು ಸೇವಾಭಂಗವೂ ಗುಪ್ತವಾಗಿದೆ. ಪ್ರಪಂಚಕ್ಕೇನು ಗೊತ್ತು? ಯಾರಲ್ಲಾದರೂ ಯಾವುದೇ ಭೂತ ಪ್ರವೇಶವಾಗುತ್ತದೆ ಅಥವಾ ಅಶುದ್ಧ ಆತ್ಮದ ಪ್ರವೇಶವಾಗುತ್ತದೆ ಎಂದರೆ ಅದೂ ಸಹ ನಷ್ಟ ಮಾಡಿಬಿಡುತ್ತದೆ. ಮಾಯಾವಿ ಆತ್ಮವು ಪ್ರವೇಶ ಮಾಡಿಬಿಡುತ್ತದೆ. ಭಲೆ ಜ್ಞಾನವಿದೆ ಆದರೆ ಯಾರೂ ಪರಿಪೂರ್ಣರಾಗಿಲ್ಲ. ಒಂದಲ್ಲ ಒಂದು ಕೊರತೆಯಿರುತ್ತದೆ ಆದ್ದರಿಂದ ಭಯವಿರಬೇಕು-ನಾವು ಬಾಬಾರವರ ಶ್ರೀಮತದನುಸಾರ ನಡೆಯಬೇಕು. ಒಂದುವೇಳೆ ಶ್ರೀಮತದಂತೆ ನಡೆಯದೆ ಯಾವುದೇ ಭ್ರಷ್ಟಕರ್ಮವನ್ನು ಮಾಡಿದರೆ ಪದವಿಯೂ ಭ್ರಷ್ಟವಾಗಿಬಿಡುವುದು ಮತ್ತು ಬಹಳ ಶಿಕ್ಷೆಗಳನ್ನು ಅನುಭವಿಸುತ್ತೀರಿ. ಕರ್ಮಗಳ ಫಲವನ್ನು ಇಲ್ಲಿಯೂ ಬಹಳ ಕಠಿಣವಾಗಿ ಭೋಗಿಸಬೇಕಾಗುತ್ತದೆ ಆದ್ದರಿಂದ ಕರ್ಮಾತೀತ ಅವಸ್ಥೆಯ ಪುರುಷಾರ್ಥ ಮಾಡಬೇಕಾಗಿದೆ. ತಂದೆಯ ಜೊತೆ ಬಹಳ ಸತ್ಯವಾಗಿರಬೇಕಾಗಿದೆ. ಎಲ್ಲರದು ಶಿವತಂದೆಯೊಂದಿಗೆ ಸಂಬಂಧವಿದೆ. ಎಲ್ಲಾ ಸೇವಾಕೇಂದ್ರಗಳು ಶಿವತಂದೆಯದಾಗಿದೆ. ನಿಮ್ಮ ಸೇವಾಕೇಂದ್ರವೆಲ್ಲಿಂದ ಬಂದಿತು. ನೀವು ಶಿವತಂದೆಯವರಾಗಿದ್ದೀರಿ. ವಿಶ್ವವಿಧ್ಯಾಲಯ ಈಶ್ವರೀಯ ವಿಶ್ವವಿದ್ಯಾಲಯವಾಗಿದೆ. ಈ ಸೇವಾಕೇಂದ್ರವು ನನ್ನದಾಗಿದೆ ಎಂಬ ವಿಚಾರ ಬಂದಿತೆಂದರೆ ಸತ್ತರೆಂದರ್ಥ. ಹೀಗೆ ನನ್ನದು ನನ್ನದು ಎಂದು ಹೇಳುತ್ತಾ ಅನೇಕರು ಬಿದ್ದುಹೋಗುತ್ತಾರೆ. ಎಲ್ಲವೂ ಶಿವತಂದೆಯದಾಗಿದೆ. ಬಾಬಾ ಈ ತನು-ಮನ-ಧನ ಎಲ್ಲವೂ ನಿಮ್ಮದಾಗಿದೆ ಎಂದು ಹೇಳುತ್ತೀರಿ. ಸ್ವರ್ಗದ ಇಡೀ ರಾಜ್ಯಭಾಗ್ಯವು ನಿಮ್ಮದೆಂದು ತಂದೆಯೂ ಸಹ ಹೇಳುತ್ತಾರೆ. ಪ್ರತಿಯಾಗಿ ಎಷ್ಟೊಂದು ಸಿಗುತ್ತದೆ. ನೀವೇನು ಕೊಡುತ್ತೀರಿ? ಸಾಯುವುದಕ್ಕೆ ಮೊದಲು ಸ್ಮಶಾನದ ಕಾವಲುಗಾರರಿಗೆ ಕೊಡುತ್ತಾರಲ್ಲವೆ. ಜೀವಿಸಿದ್ದಂತೆಯೇ ದಾನ ಮಾಡುತ್ತಾರೆ. ಇವರು ಇನ್ನು ಉಳಿಯುವುದಿಲ್ಲ ಅಂತಿಮ ಸ್ಥಿತಿಯೆಂದು ತಿಳಿಯುತ್ತದೆ ಆಗ ದಾನ-ಪುಣ್ಯ ಮಾಡಿಸುತ್ತಾರೆ. ತಂದೆಯು ಸಹ ತಿಳಿಸುತ್ತಾರೆ - ಮಕ್ಕಳೇ, ಜೀವಿಸಿದ್ದಂತೆಯೇ ಮಾಡಿಬಿಡಿ. ಇದಂತೂ ಹಳೆಯ ಶರೀರವಾಗಿದೆ. ನೀವಾತ್ಮಗಳು ನನ್ನವರಾಗಿದ್ದೀರಿ. ಈ ಶರೀರವು ಪಾತ್ರವನ್ನಭಿನಯಿಸುತ್ತಾ-ಅಭಿನಯಿಸುತ್ತಾ ಹಳೆಯದಾಗಿಬಿಟ್ಟಿದೆ. ಈಗ ಪುನಃ ನನ್ನವರಾಗಿ. ಆಗ ನಿಮ್ಮ ಆತ್ಮ ಮತ್ತು ಶರೀರ ಎರಡೂ ಶುದ್ಧವಾಗುತ್ತದೆಎರಡೂ ಒಟ್ಟಿಗೆ ಸ್ವಚ್ಛವಾಗುತ್ತಾ ಹೋಗುತ್ತದೆ. ಆತ್ಮವು ಅಪವಿತ್ರವಾಗಿದೆ ಅದನ್ನು ಶುದ್ಧ ಮಾಡಿಕೊಳ್ಳಬೇಕಾಗಿದೆ ಅಂದಾಗ ನನ್ನ ಜೊತೆ ಯೋಗವನ್ನು ಜೋಡಿಸುವುದರಿಂದಲೇ ಶುದ್ಧವಾಗುತ್ತೀರಿ. ಯೋಗ ಮಾಡಿದರೆ ಏರುವಕಲೆಯಾಗುವುದು, ಯೋಗವಿಲ್ಲವೆಂದರೆ ಬೀಳುವ ಕಲೆಯಾಗುವುದು. ಸೇವೆಯ ಆಸಕ್ತಿಯೂ ಬೇಕು. ಸೇವೆಗೆ ಹೋಗುವುದೇ ಎಂದು ಕೇಳಬೇಕಾಗಿಲ್ಲ. ಇವರಿಗೆ ಆಸಕ್ತಿ ಇಲ್ಲವೆಂದು ತಂದೆಯು ತಿಳಿಯುತ್ತಾರೆ. ಮನಸಾ-ವಾಚಾ-ಕರ್ಮಣ ಸೇವೆಯ ಆಸಕ್ತಿ ಬೇಕು. ಮನಸ್ಸಾ ಇಲ್ಲವೆಂದರೆ ವಾಚಾ ಹಾಗೂ ಕರ್ಮಣ ಒಂದಲ್ಲ ಒಂದು ಸೇವೆಯಲ್ಲಿ ತೊಡಗಿದಾಗ ಅದಕ್ಕೆ ಪ್ರತಿಯಾಗಿ ಸಿಗುವುದು. ಯಾರು ತಾವೇ ಮಾಡುತ್ತಾರೆಯೋ ಅವರೇ ದೇವತೆ, ಹೇಳಿಸಿಕೊಂಡು ಮಾಡಿದರೆ ಮನುಷ್ಯರು. ಹೇಳಿಸಿಕೊಂಡೂ ಮಾಡದೇ ಇದ್ದರೆ ಯಾವುದೇ ಕೆಲಸಕ್ಕೆ ಇಲ್ಲ. ಎಷ್ಟು ಸೇವೆ ಮಾಡುತ್ತೀರೋ ಅಷ್ಟು ಫಲವು ಸಿಗುತ್ತದೆ.

ಶಿವಬಾಬಾಕೇಳುತ್ತಾರೆ-ಮಕ್ಕಳೇ, ನನಗೆ ಕೈಯಿದೆಯೇ? ಎಂದು. ಈ ಶರೀರದಲ್ಲಿ ಶಿವಬಾಬಾ ಕುಳಿತಿದ್ದಾರಲ್ಲವೆ. ಪತ್ರ ಬರೆಯುತ್ತಾರಲ್ಲವೆ. ನಂದಿಯ ಮೇಲೆ ಇಡೀ ದಿನ ಸವಾರಿ ಮಾಡುತ್ತಾರೇನು? ನಂದಿ ಯಾವಾಗ ಸುಸ್ತಾಗಿಬಿಡುತ್ತದೆ ಆಗ ಅದರ ಕಣ್ಣುಗಳಲ್ಲಿ ನೀರು ಬಂದು ಬಿಡುತ್ತದೆ. ಆದರೆ ಇಲ್ಲಂತು ಕಣ್ಣೀರು ಬರುವ ಮಾತಿಲ್ಲ. ಇವರಂತೂ ಸೇವೆ ಮಾಡಲೇಬೇಕಾಗಿದೆ. ಮಕ್ಕಳಿಗೆ ನನ್ನೊಬ್ಬನನ್ನೆ ನೆನಪು ಮಾಡಿ ಎಂದು ತಂದೆಯು ತಿಳಿಸುತ್ತಾರೆ. ಇದನ್ನು ಶಿವಬಾಬಾ ತಿಳಿಸುತ್ತಾರೆ, ಇವರ (ಬ್ರಹ್ಮಾ) ಆತ್ಮವೂ ಕೇಳುತ್ತದೆ. ಇದಂತೂ ಬಹಳ ಸಹಜವಾಗಿದೆ. ಬೇಹದ್ದಿನ ತಂದೆಯು ಸ್ವರ್ಗದ ರಚಯಿತನಾಗಿದ್ದಾರೆ. ಬಾಬಾ ಸ್ವರ್ಗದ ಸ್ಥಾಪನೆ, ನರಕದ ವಿನಾಶ ಮಾಡಿಸಲು ಬರುತ್ತಾರೆ. ಮಹಾಭಾರತ ಯುದ್ಧವೂ ಸಮ್ಮುಖದಲ್ಲಿ ನಿಂತಿದೆ. ಯಾದವರು, ಕೌರವರು, ಪಾಂಡವರೂ ಇದ್ದಾರೆ. ನಿಮಗೆ ಗೊತ್ತಿದೆ - ಈಗ ಆಟವು ಪೂರ್ಣವಾಗುತ್ತದೆ. ಬಾಬಾ ಕರೆದುಕೊಂಡು ಹೋಗಲು ಬಂದಿದ್ದಾರೆ, ತಲೆಯ ಮೇಲೆ ವಿಕರ್ಮಗಳ ಹೊರೆ ಬಹಳ ಇದೆ. ನೆನಪು ಮಾಡಲಿಲ್ಲವೆಂದರೆ ಮಹಾರಾಣಿ-ಮಹಾರಾಜರಾಗಲು ಸಾಧ್ಯವಿಲ್ಲ. ಇದು ರಾಜಯೋಗವಾಗಿದೆಯೇ ಹೊರತು ಪ್ರಜಾಯೋಗವಲ್ಲ. ಪೂರ್ಣ ಯೋಗವಿಲ್ಲವೆಂದರೆ ಪ್ರಜೆಗಳಾಗಿಬಿಡುತ್ತಾರೆ. ಬಾಬಾ ನಾವು ಪೂರ್ಣ ಆಸ್ತಿಯನ್ನು ಪಡೆಯುತ್ತೇವೆ ಎಂದು ಹೇಳುತ್ತಾರೆ. ಅಂದಮೇಲೆ ಸೇವೆಯ ಆಸಕ್ತಿ ಇರಬೇಕು. ಬರೆದು ಕೇಳಬಹುದಾಗಿದೆ-ಒಂದುವೇಳೆ ಈ ಸಮಯದಲ್ಲಿ ಶರೀರವನ್ನು ಬಿಟ್ಟುಹೋದವೆಂದರೆ ಏನಾಗುತ್ತೇವೆ? ಎಂದು. ಪರಿಪೂರ್ಣರಂತೂ ಅಂತ್ಯದಲ್ಲಿಯೇ ಆಗುತ್ತೀರಿ. ಈಗ ನೀವು ಇನ್ನೂ ಅಪೂರ್ಣರಾಗಿದ್ದೀರಿ. ತಮ್ಮ ಅವಸ್ಥೆಯನ್ನು ಪರಿಶೀಲನೆ ಮಾಡಿಕೊಳ್ಳಬೇಕು- ನಾವು ಎಷ್ಟು ಬಾಬಾರವರ ಸೇವೆಯನ್ನು ಮಾಡುತ್ತಿದ್ದೇನೆ? ಎಷ್ಟು ಆಜ್ಞಾಕಾರಿಗಳು, ಎಷ್ಟು ಪ್ರಾಮಾಣಿಕರಾಗಿದ್ದೇವೆ?ಸೇವೆಗಾಗಿ ಎಷ್ಟು ಚಡಪಡಿಸುತ್ತೇವೆ? ಯಾರಿಗಾದರೂ ಹೇಗೆ ಜೀವನದಾನ ಮಾಡುವುದು ? ಪಾಪ ಬಹಳ ದುಃಖಿಯಾಗಿದ್ದಾರೆ ಎಂದು. ಇವರು ಒಬ್ಬರೇ ಸದ್ಗುರುವಾಗಿದ್ದಾರೆ-ಶಾಂತಿಧಾಮ, ಸುಖಧಾಮದಲ್ಲಿ ಕರೆದುಕೊಂಡು ಹೋಗಲು ಬಂದಿದ್ದಾರೆ. ಆ ಗುರುಗಳು ತಮ್ಮನ್ನು ಜಗತ್ಪಿತ, ಜಗತ್ಶಿಕ್ಷಕರೆಂದು ಕರಸಿಕೊಳ್ಳಲು ಸಾಧ್ಯವಿಲ್ಲ. ಕೇವಲ ಜಗದ್ಗುರುವೆಂದು ಕರೆಸಿಕೊಳ್ಳುತ್ತಾರೆ. ಇವರಂತೂ ಜಗತ್ತಿನ ತಂದೆ, ಶಿಕ್ಷಕ, ಗುರು ಒಬ್ಬರೇ ಆಗಿದ್ದಾರೆ. ತಂದೆಯು ಬಂದಿದ್ದಾರೆಂದು ನಿಮಗೆ ಗೊತ್ತಿದೆ ಅಂದಮೇಲೆ ತಂದೆಯಿಂದ ಪೂರ್ಣ ಆಸ್ತಿಯನ್ನು ಪಡೆಯಿರಿ. ದೇಹಾಭಿಮಾನವು ಒಳ್ಳೆಯದಲ್ಲ. ದೇಹೀ

ಅಭಿಮಾನಿಯಾಗಿ ತಂದೆಯನ್ನು ನೆನಪು ಮಾಡಿ ಆಗ ನಿಮ್ಮ ಶರೀರವು ನಿರೋಗಿಯಾಗಿಬಿಡುವುದು. ಸತ್ಯಯುಗದಲ್ಲಂತೂ ಪವಿತ್ರತೆ, ಸುಖ ಶಾಂತಿ, ಸಂಪತ್ತಿರುತ್ತದೆ. ಅಪಾರ ಸಂಪತ್ತಿರುತ್ತದೆ. ಇಲ್ಲಂತೂ ನೋಡಿ, ಹೊಟ್ಟೆಗಾಗಿಯೂ ಎಷ್ಟೊಂದು ಹೊಡೆದಾಟವಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಆತ್ಮಿಕ ಮಾರ್ಗದರ್ಶಕರಾಗಿ ಸತ್ಯಯಾತ್ರೆ ಮಾಡಬೇಕು ಮತ್ತು ಮಾಡಿಸಬೇಕಾಗಿದೆ. ಬುದ್ಧಿಯೋಗವನ್ನು ಬಹಳ ಸಂಭಾಲನೆ ಮಾಡಬೇಕಾಗಿದೆ. ತಮ್ಮ ಮೇಲೆ ಬಹಳ ಎಚ್ಚರಿಕೆಯನ್ನಿಡಬೇಕಾಗಿದೆ.

2. ತಂದೆಯ ಜೊತೆ ಸತ್ಯವಾಗಿರಬೇಕಾಗಿದೆ. ಕರ್ಮಾತೀತರಾಗುವ ಪುರುಷಾರ್ಥ ಮಾಡಬೇಕಾಗಿದೆ. ಜೀವಿಸಿದ್ದಂತೆಯೇ ಎಲ್ಲವನ್ನೂ ತಂದೆಗೆ ಅರ್ಪಣೆ ಮಾಡಿ ಸಫಲ ಮಾಡಿಕೊಳ್ಳಬೇಕಾಗಿದೆ.

ವರದಾನ: ತಮ್ಮ ಚಲನೆ ಮತ್ತು ಚಹರೆಯ ಮೂಲಕ ಸೇವೆ ಮಾಡುವಂತಹ ನಿರಂತರ ಯೋಗಿ ನಿರಂತರ ಸೇವಾಧಾರಿ ಭವ. ಸದಾ ಈ ಸ್ಮೃತಿಯಲ್ಲಿರಿ - ತಂದೆಯನ್ನು ತಿಳಿಯುವ ಮತ್ತು ಪಡೆಯುವವರು, ಕೋಟಿಯಲ್ಲಿ ಕೆಲವರು ನಾವು ಆತ್ಮರಾಗಿದ್ದೇವೆ, ಇದೇ ಖುಷಿಯಲ್ಲಿರುತ್ತೀರೆಂದರೆ ತಮ್ಮ ಈ ಚಹರೆಯು ನಡೆಯುತ್ತಾ-ತಿರುಗಾಡುತ್ತಿದ್ದರೂ ಸೇವಾಕೇಂದ್ರವಾಗಿ ಬಿಡುತ್ತದೆ. ತಮ್ಮ ಹರ್ಷಿತ ಚಹರೆಯಿಂದ ತಂದೆಯ ಪರಿಚಯವು ಸಿಗುತ್ತಿರುತ್ತದೆ. ಬಾಪ್ದಾದಾರವರು ಪ್ರತಿಯೊಂದು ಮಕ್ಕಳನ್ನು ಇದಕ್ಕೆ ಯೋಗ್ಯರೆಂದು ತಿಳಿಯುತ್ತಾರೆ. ಅಂದಮೇಲೆ ನಡೆಯುತ್ತಾ-ತಿರುಗಾಡುತ್ತಾ, ತಿನ್ನುತ್ತಾ-ಕುಡಿಯುತ್ತಾ, ತಮ್ಮ ಚಲನೆ ಮತ್ತು ಚಹರೆಯ ಮೂಲಕ ತಂದೆಯ ಪರಿಚಯವನ್ನು ಕೊಡುವ ಸೇವೆಯನ್ನು ಮಾಡುವುದರಿಂದ ಸಹಜವಾಗಿಯೇ ನಿರಂತರ ಯೋಗಿ, ನಿರಂತರ ಸೇವಾಧಾರಿ ಆಗಿಬಿಡುತ್ತೀರಿ.

ಸ್ಲೋಗನ್: ಯಾರು ಅಂಗಧನ ಸಮಾನ ಸದಾ ಅಚಲ-ಅಡೋಲ, ಏಕರಸವಾಗಿರುತ್ತಾರೆ, ಅವರಿಗೆ ಮಾಯಾ ಶತ್ರುವು ಅಲುಗಾಡಿಸಲೂ ಸಾಧ್ಯವಾಗುವುದಿಲ್ಲ.